ಪಾಪ, ಅವರಿಗೆ ಯಾವ ಸಹಯವೂ ಸರ್ಕಾರದ ವತಿಯಿಂದ ಸಿಕ್ಕಿಲ್ಲ. ಮಾಲಿಕನ ವತಿಯಿಂದಲೂ ಕೊಡಿಸತಕ್ಕ ಪ್ರಯತ್ನ ಮಾಡಿಲ್ಲ. ಸರ್ಕಾರದವರು ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಈ ಘಟನೆ ನಡೆದ ಜಾಗಕ್ಕೆ ನಾನು ಹೋಗಿದ್ದೆ. ಕಾರ್ಪೊರೇಷನ್‌ನವರು ಮೊದಲೇ ನೋಟೀಸ್ ಕೊಟ್ಟಿದ್ದರು ಈಜಾಗದಲ್ಲಿ ಸ್ವಲ್ಪ ಅಭದ್ರತೆ ಇದೆ ಎಂದು. ಅಲ್ಲಿಂದ ಗುಡಿಸಲುಗಳನ್ನು ಖಾಲಿಮಾಡಬೇಕೆಂದು ಅವರು ಹೇಳಿದ್ದಾರೆ. ಆದರಂತೆ ಕಂಟ್ರಾಕ್ಟರ್‌ಗೆ ನೋಟೀಸು ಕೊಟ್ಟಿದ್ದೂ ಆಯಿತು. ಆತನ ಮೇಲೆ ಏನಾದರೂ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಸಾಧ್ಯವೋ ಅದನ್ನು ಮಾಡುತ್ತೇವೆ. ಇನ್ನು, ಪರಿಹಾರ ಆ ಕಂಟ್ರಾಕ್ಟ್‌ದಾರನೇ ಕೊಡಬೇಕಾಗುತ್ತದೆ. ಕಂಟ್ರಾಕ್ಟರ್‌ನನ್ನು ಹಿಡಿದುಕೊಂಡು ಬಂದು ಈ ಹಾನಿಗೆ ಪರಿಹಾರ ಕೊಡಬೇಕೆಂದು ಹೇಳಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರದ ವತಿಯಿಂದ ಏನಾದರೂ ಸಹಾಯ ಮಾಡಿ ಎಂದು ಹೇಳಿದರೆ ಕಂಟ್ರಾಕ್ಟರ್‌ಗೆ ಹೇಳುತ್ತೇವೆ, ಅಭದ್ರತೆ ಇದೆ ಎಂದು ಏನೇ ಹೇಳುತ್ತಿದ್ದೀರಿ.

ಅಧ್ಯಕ್ಷರು.—ಪ್ರೈವೇಟ್‌ನವರು ಅವರನ್ನು ಕರೆದುಕೊಂಡು ಬಂದು ಗುಡಿಸಲುಗಳನ್ನು ಹಾಕಿದ್ದಾರೆ ಸರ್ಕಾರ ಏನು ಮಾಡಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಖಾಸಗಿಯವರಿಗೆ, ಕೂಲಿಕಾರರಿಗೆ ಸರ್ಕಾರ ಏನು ಕೊಟ್ಟೇ ಇಲ್ಲವೇ ? ಗುಡಿಸಲುಗಳು ಸುಟ್ಟು ಕೂಲಿಗಾರರು ಬೀದಿಯಲ್ಲಿ ಬಿದ್ದಿರುವಾಗ ಅವರಿಗೆ ಔಷಧಿ ಕೊಡಿಸತಕ್ಕದ್ದು, ಪರಿಹಾರ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ ಇದೆ. ಮಾಲೀಕನನ್ನು ಹಿಡಿದು ಕೊಂಡು ಬಂದು ಅವನ ಕೈಯಿಂದ ಕೊಡಿಸುತ್ತೇವೆ ಎಂದು ಹೇಳಿದರೆ ಹೇಗೆ ? 16ನೇ ತಾರೀಖಿಗೆ ನಡೆದಂಥ ಘಟನೆ. ಇವತ್ತು ತಾರೀಖು 21. ಸುಮಾರು ಐದಾರು ದಿನಗಳಾಯಿತು. ಮಾಲೀಕನನ್ನು ಹುಡುಕಿಸುತ್ತೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎಂದು ಹೇಳಿಲ್ಲ.

ಅಧ್ಯಕ್ಷರು.—ಖಾಸಗಿ ಮಾಲೀಕರು ಕಟ್ಟಡ ಕಟ್ಟುವುದಕ್ಕೆ ಜನರನ್ನು ಕರೆದುಕೊಂಡು ಬಂದು, ಅವರ ಗುಡಿಸಲುಗಳು ಸುಟ್ಟುಹೋಗಿದ್ದರೆ ಇದಕ್ಕೆ ಸರ್ಕಾರ ಹೇಗೆ ಜವಾಬ್ದಾರಿಯಾಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾರ್ಮಿಕ ಸಚಿವರು ಇಲ್ಲೇ ಇದ್ದಾರೆ. ಇದು ಕಾಂಟ್ರಾಕ್ಟ್ ಲೇಬರ್ ಆ್ಯಕ್ಟ್‌ನಲ್ಲಿ ಬರುತ್ತದೆ.

ಶ್ರೀ ಅಜೀಜ್ ಸೇಠ್.—ನಿರ್ದಿಷ್ಟವಾಗಿ ಏನು ವಿಷಯ ಎಂದು ಪತ್ರದಲ್ಲಿ ಕೊಟ್ಟರೆ ಅದು ಕಾಂಟ್ರಾಕ್ಟ್ ಲೇಬರ್ ಹೌದೇ, ಅಥವಾ ಅಲ್ಲವೇ ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ಸಾಧ್ಯವಾದಷ್ಟು ಮಟ್ಟಿಗೆ ವೈಯಕ್ತಿಕ ಪ್ರಶ್ನೆಗಳನ್ನು ಸದನದಲ್ಲಿ ತರುವುದಕ್ಕೆ ಪ್ರಯತ್ನಿಸಬೇಡಿ. ಇದನ್ನು ಆದಷ್ಟು ಕಡಿಮೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಇಂಡಿವಿಜ್ಯೂಯಲ್ ಮ್ಯಾಟರ್ರಾ ?

ಅಧ್ಯಕ್ಷರು.—ನಿಮಗಲ್ಲ, ಶಿವಮೂರ್ತಿಯವರಿಗೆ ನಾನು ಹೇಳುತ್ತಿದ್ದೇನೆ.

(ix) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಚಿಕ್ಕಮಾಗಡಿಯ ರುದ್ರಪ್ಪ ಎಂಬವರಿಗೆ ರಕ್ಷಣೆ ಒದಗಿಸುವ ಬಗ್ಗೆ

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಚಿಕ್ಕಮಾಗಡಿ ಊರಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಬೋವಿ ಜನಾಂಗದ ಶ್ರೀ ರುದ್ರಪ್ಪ ಎನ್ನುವವರ ಮೇಲೆ 55 ಜನ ಬೇರೆ ಜನಾಂಗದವರು ಸೇರಿಬಿಟ್ಟು ಎರಡು ನೂರು ರೂಪಾಯಿ ದಂಡ ಹಾಕಿದ್ದಾರೆ. ನಾನು ಏನು ತಪ್ಪು ಮಾಡಿದ್ದೇನೆ ಎಂದು ರುದ್ರಪ್ಪ ಕೇಳಿದ್ದಕ್ಕೆ – ಆ ಊರಿನಲ್ಲಿ ಬೋವಿ ಜನಾಂಗದವರ ಮನೆ ರುದ್ರಪ್ಪನವರದ್ದು ಒಬ್ಬರದ್ದೇ. ಅವರು ಅಲ್ಲಿ ಇಲ್ಲಿ ಸ್ವಲ್ಪ ಓಡಾಡಿ ಹರಿಜನ–ಗಿರಿಜನ ಮೇಲೆ ಏನಾದರೂ ದೌರ್ಜನ್ಯ ನಡೆದರೆ ಆದರ ಬಗ್ಗೆ ಪ್ರತಿಭಟನೆ ಮಾಡತಕ್ಕಂಥ ಶಕ್ತಿಯನ್ನು ಪಡೆದವರಾಗಿದ್ದಾರೆ. ರುದ್ರಪ್ಪನವರು ದಂಡ ಹಾಕಿದ್ದನ್ನು ತಿರಸ್ಕರಿಸಿದಾಗ ಅವರು ಆತನ ಮೇಲೆ ಅವಾಚ್ಯ ಶಬ್ದಗಳಿಂದ ಬಯ್ದಿದ್ದಾರೆ. ''ನೀನು ಹೇಗೆ ಇಲ್ಲಿ ಬದುಕುತ್ತೀಯಾ, ನಿನಗೆ ಇರಲಿಕ್ಕೇ ಬಿಡುವುದಿಲ್ಲ, ನಿನ್ನ ಮನೆಯನ್ನು ಸುಟ್ಟುಹಾಕುತ್ತೇವೆ'' ಎಂದು ಬೆದರಿಕೆ ಹಾಕಿದ್ದಾರೆ. ಈ 55 ಜನರಲ್ಲಿ ಶ್ರೀಮಂತರೇ ಹೆಚ್ಚಿನವರಿದ್ದಾರೆ. ಅವರ ಹೆಸರುಗಳು ಬೇಕಾದರೆ ಹೇಳುತ್ತೇನೆ.

ಅಧ್ಯಕ್ಷರು.—ದಯವಿಟ್ಟು ಹೆಸರುಗಳನ್ನು ಓದುವುದಕ್ಕೆ ಹೋಗಬೇಡಿ.

12-30 p.m.

ಶ್ರೀ ಕೆ. ಶಿವಮೂರ್ತಿ.—ಮುಂದುವರಿದ ಕೋಮಿನವರು ಇರತಕ್ಕಂಥ ಬಾವಿ ನೀರನ್ನು ರುದ್ರಪ್ಪನವರು ತೆಗೆದುಕೊಳ್ಳುವ ಹಾಗಿಲ್ಲ. ಆಮೇಲೆ ಇವರ ಜೊತೆಯಲ್ಲಿ ಬೇರೆಯವರು ಏನಾದರೂ ಮಾತನಾಡಿದರೆ ಇಲ್ಲವೇ ಬಾವಿಯ ನೀರು ಕೊಟ್ಟರೆ, ಕುಡಿಯಲು ಚಾ ಕೊಟ್ಟರೆ ಅಂತಹವರಿಗೆ 25 ರೂಪಾಯಿಗಳ ದಂಡ ವಿಧಿಸಲಾಗುವುದೆಂದು ಡಂಗುರ ಹೊಡೆಸಿದ್ದಾರೆ. ಇದರಿಂದ ಅವರು ತಮ್ಮ ಪ್ರಾಣಕ್ಕೆ ಅಪಾಯವಿದೆ. ರಕ್ಷಣೆಬೇಕು ಎಂದು ಕೆಳುತ್ತಿದ್ದಾರೆ. ಇದಕ್ಕೆ ಸಂಭಂದಪಟ್ಟಂತೆ ಕೋರ್ಟಿನಲ್ಲಿ ಅನ್-ಟಚಬಿಲಿಟಿ ಆಕ್ಟ್ ಪ್ರಕಾರ ಕೇಸ್ ಹಾಕಿದ್ದಾರೆ. ಆದರೆ ತಮಗೆ ಸಧ್ಯಕ್ಕೆ ರಕ್ಷಣೆ ಬೇಕೆಂದು ಕೇಳುತ್ತಿದ್ದಾರೆ. ಈಗ ಸಧ್ಯಕ್ಕೆ ಅವರು ಊರಿನಲ್ಲಿ ಇಲ್ಲ, ಕಾಡಿನಲ್ಲಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದಂಥ ಪರಿಸ್ಥಿತಿ ಇವೊತ್ತಿಗೂ ಸಹ ಅಲ್ಲಿ ಇದೆ. ಇದನ್ನು ಹೋಗಲಾಡಿಸಲು ಮತ್ತು ಶ್ರೀ ರುದ್ರಪ್ಪನವರಿಗೆ ಸರ್ಕಾರ ಯಾವ ರೀತಿ ರಕ್ಷಣೆ ಕೊಡುತ್ತದೆಂಬುದನ್ನು ನಾನು ತಮ್ಮ ಮೂಲಕ ಸರ್ಕಾರದಿಂದ ಕೇಳಬಯಸುತ್ತೇನೆ.

ಶ್ರೀ ರಮೇಶ ಜಿಗಜಣಗಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀ ಶಿವಮೂರ್ತಿಯವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅವರು ಯಾವ ವಕ್ತಿಗೆ ರಕ್ಷಣೆ ಕೊಡಬೇಕೆಂದು ಕೇಳುತ್ತಿದ್ದಾರೋ ಆ ವ್ಯಕ್ತಿಗೆ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ. ಈ ವಿಚಾರದಲ್ಲಿ ನಾನು ಸವಿಸ್ತಾರವಾದಂಥ ವರದಿಯನ್ನು ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಿಯಮ 334ರ ಕೆಳಗೆ ನಾನೂ ಸಹ ಒಂದು ನೋಟೀಸನ್ನು ನಿನ್ನೆ ದಿವಸ ತಡವಾಗಿ ಕೊಟ್ಟಿ. ಆದ್ದರಿಂದ ಈ ದಿನದ ಪಟ್ಟಿಯಲ್ಲಿ ಸೇರಬಹುದೆಂದು ತಿಳಿದುಕೊಂಡಿದ್ದೆ. ಆದರೆ ಸೇರಿಲ್ಲ. ನಾಳೆಯ ಪಟ್ಟಿಯಲ್ಲಿಯಾದರೂ ಸೇರಿಸ್ತುತೀರಾ ?

ಅಧ್ಯಕ್ಷರು.—ತಾವು ಮತ್ತೊಮ್ಮೆ ನೋಟೀಸ್ ಕೊಟ್ಟರೆ ನಾಳೆ ತೆಗೆದುಕೊಳ್ಳಲಾಗುತ್ತದೆ.

* ಕೊಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ರೈತರಿಗುಂಟಾದ ಬೆಳೆ ನಷ್ಟಕ್ಕೆ ಪರಿಹಾರ ಕೊಡುವ ಬಗ್ಗೆ

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಅಕಾಲಿಕ ಮಳೆ ಬಂದ ಕಾರಣ ರೈತರು ಬೆಳೆದಂಥ ಬೆಳೆಗಳೆಲ್ಲಾ ನಷ್ಟವಾಗಿದೆ. ಈ ಬಗ್ಗೆ ತಾರೀಖು 19-3-1984ರ ಪ್ರಜಾವಾಣಿಯಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಈ ರೀತಿ ಹೇಳಿದ್ದಾರೆ :

"ಬಳ್ಳಿಯಲ್ಲೇ ಕೊಳೆತ ಕಲ್ಲಂಗಡಿ, ಚಪ್ಪರದಿಂದ ಕೆಳಗಿಳಿದು ತಿಪ್ಪೆಯಾಗಿರುವ ದ್ರಾಕ್ಷಿ, ಮರದಲ್ಲೇ ಕಪ್ಪಿಟ್ಟಿರುವ ಹುಣಸೆ, ಭೂಮಿಯಲ್ಲೇ ಕರಗಿ ಹೋದ ಆಲೂಗಡ್ಡೆ, ಸುಳಿವೇ ಸಿಗದ ಮಾವು".

ಈ ಬಗ್ಗೆ ನಾನು ಮಾನ್ಯ ಮುಖ್ಯಿ ಮಂತ್ರಿಗಳ ಹಾಗೂ ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ಕೆಲವು ವಿಚಾರಗಳನ್ನು ತರಬೇಕಾಗಿದೆ. ಏನೆಂದರೆ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ 40 ಸಾವಿರ ಎಕರೆ ದ್ರಾಕ್ಷಿ, 24 ಸಾವಿರ ಎಕರೆ ಆಲೂಗಡ್ಡೆ, 5 ಸಾವಿರ ಎಕರೆ ಕಲ್ಲಂಗಡಿ ಮತ್ತು 8,500 ಎಕರೆ ಮಾವಿನ ಪಸಲು ಅಕಾಲಿಕ ಮಳೆಗೊಳಗಾಗಿ ರೈತರಿಗೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗಿದೆ. ಅನೇಕ ಜನ ರೈತರು ಈ ಬೆಳೆಗಳನ್ನು ಬೆಳೆಯಲು ಅಲ್ಪಾವಧಿ ಮತ್ತು ಧೀರ್ಘಾವಧಿ ಸಾಲಗಳನ್ನು ಪಡೆದಿದ್ದರು. ಆದರೆ ಈಗ ಇವರಿಗೆಲ್ಲಾ ಬೆಳೆ ನಷ್ಟ ಆಗಿರುವುದರಿಂದ ಸಾಲ ವಾಪಸ್ಸು ಕೊಡುವುದು ಕಷ್ಟವಾಗಿದೆ. ಪತ್ರಿಕಾ ಕರ್ತರು ಸ್ಥಳಕ್ಕೆ ಹೋಗಿ ಕಣ್ಣಾರೆ ನೋಡಿದ್ದನ್ನು ಪತ್ರಿಕೆಯಲ್ಲಿ ಪ್ರಕಟ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ನಾಗರಾಜ್ ಅವರೂ ಸಹ ಕೆಲವು ವಿವರಗಳನ್ನು ಕೊಡುತ್ತಾರೆ. ಮಾನ್ಯ ಮುಖ್ಯಿ ಮಂತ್ರಿಗಳು ಮತ್ತು ಮಾನ್ಯ ಕಂದಾಯ ಮಂತ್ರಿಗಳು ಈ ಬಗ್ಗೆ ಸವಿಸ್ತಾರವಾದ ವರದಿಯನ್ನು ತರಿಸಿಕೊಂಡು ನಷ್ಟಕ್ಕೆ ಒಳಗಾದವರಿಗೆ ಕೂಡಲೇ ಪರಿಹಾರವನ್ನು ಒದಗಿಸಬೇಕು. ಇಲ್ಲದಿದ್ದರೆ, ಅವರು ಸಾಲಗಾರರಾಗಿಯೇ ಉಳಿಯುತ್ತಾರೆ. ಮತ್ತು ಅವರು ಮುಂದಿನ ಬೆಳೆಯನ್ನು ಬೆಳೆಯುವುದು ಕಷ್ಟವಾಗುತ್ತದೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಅಕಾಲಿಕ ಮಳೆಯಿಂದ ಸುಮಾರು 20 ಕೋಟಿ ರೂಪಾಯಿಗಳಷ್ಟು ಬೆಳೆ ಹಾಳಾಗಿದೆಯೆಂದು ಪತ್ರಿಕೆಯವರೇ ಹೇಳಿರುವುದರಿಂದ ಸರ್ಕಾರದವರು ನಷ್ಟಕ್ಕೊಳಗಾದ ರೈತರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.